# ಸರಕಾರಿ ಪ್ರೌಢಶಾಲೆ, ಚಿಕ್ಕಆದಾಪೂರ ತಾ : ಹುನಗುಂದ (ಇಳಕಲ್) ಜಿ : ಬಾಗಲಕೋಟೆ

## ಎಸ್ ಎಸ್ ಎಲ್ ಸಿ " ಗಣಿತ" ಮಾದರಿ ಪ್ರಶ್ನೆ ಪತ್ರಿಕೆ

ಅಂಕಗಳು : 80 ಸಮಯ : 3 ಗಂಟೆ: 15 ನಿಮಿಷಗಳು

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ: $8 \times 1 = 8$

1) ಒಂದು ವರ್ಗ ಬಹುಪದೋಕ್ತಿಯು ಹೊಂದಿರುವ ಗರಿಷ್ಠ ಶೂನ್ಯತೆಗಳ ಸಂಖ್ಯೆಯು..

A) 2 B) 3 C) 1 D) 0

2) ತ್ರಿಜ್ಯ 'r' ಮಾನ ಎತ್ತರ 'h' ಆಗಿರುವ ಒಂದು ಸಿಲಿಂಡರ್ ನ ಪೂರ್ಣ ಮೇಲ್ಮೈ ವಿಸ್ತೀರ್ಣವು

A) $2\pi rh$ B) $2\pi r(r+h)$ C) $\pi r(r+l)$ D) $\pi rl$

3) $ax^2 + bx + c = 0$ ಈ ವರ್ಗ ಸಮೀಕರಣದ ಮೂಲಗಳ ಸ್ವಭಾವವು ' ಯಾವುದೇ ಮೂಲಗಳನ್ನು ಹೊಂದಿಲ್ಲ' ದಿದ್ದಾಗ

A) $b^2 - 4ac < 0$ B) $b^2 + 4ac < 0$ C) $b^2 - 4ac > 0$ D) $b^2 - 4ac = 0$

4) sin 60° ಆದಾಗ, cos 30° ರ ಬೆಲೆಯು..

A) 1 B) 3/2 C) 3/4 D) 2/3

5) 9 ಮತ್ತು 13 ಇವುಗಳ ಸಮಾಂತರ ಮಾಧ್ಯವು .....

A) 12 B) 15 C) 22 D) 11

6) ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳಾದ $x + 2y = 3$ ಮತ್ತು $2x + 4y = k$ ಗಳು ಐಕ್ಯಗೊಂಡರೆ, 'k' ಯ ಬೆಲೆಯು

A) 3 B) 6 C) – 3 D) – 6

7) 11 ಮತ್ತು 19 ರ ಮ. ಸಾ. ಅ. ವು

A) 11 B) 1 C) 19 D) 209

8) ಚಿತ್ರದಲ್ಲಿ $\angle ABC = 90°$, AB =8 cm, AC = 17 cm ಆದಾಗ, BC ಯ ಉದ್ದವು..

A) 10cm B) 13 cm

C) 15 cm D) 12 cm




II) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $8 \times 1 = 8$

9) $17 = (8 \times 2) + 1$ ಇದನ್ನು ಯೂಕ್ಲಿಡ್ ನ ಅನು ಪ್ರಮೇಯ $a = bq + r$ ಪ್ರಕಾರ, ಶೇಷವು ಎಷ್ಟಾಗುತ್ತದೆ?

10) $x ( x - 3 ) = 0$ ಈ ಸಮೀಕರಣದ ಆದರ್ಶರೂಪ ಕಂಡುಹಿಡಿಯಿರಿ.

11) ಒಂದು ವೃತ್ತಾಕಾರದ ಪಾದದ ತ್ರಿಜ್ಯ 'r' ಮತ್ತು ಎತ್ತರ 'h'ಆಗಿರುವ ನೇರ ಸಿಲಿಂಡರ್ ನ ವಕ್ರ ಮೇಲ್ಮೈ ವಿಸ್ತೀರ್ಣ ಕಂಡು ಹಿಡಿಯುವ ಸೂತ್ರ ಬರೆಯಿರಿ.

12) $P(x) = 2x^3 - 3x^2 - x + 2$ ಈ ಘನ ಬಹುಪದೋಕ್ತಿಯ ಮಹತ್ತಮ (ಡಿಗ್ರಿ) ಎಷ್ಟು?

13) ಚಿತ್ರದಲ್ಲಿ, $\angle PQR = 90°$ ಆದರೆ tan R ಮತ್ತು cos P ಗಳ ಬೆಲೆಯನ್ನು ಕಂಡುಹಿಡಿಯಿರಿ.




14) 6 ಮುಖದ ಒಂದು ದಾಳಗಳನ್ನು ಏಕಕಾಲದಲ್ಲಿ ಉರುಳಿಸಿದಾಗ, ವರ್ಗ ಸಂಖ್ಯೆಗಳನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

15) ಎರಡು ಸಮರೂಪ ತ್ರಿಭುಜಗಳ ವಿಸ್ತೀರ್ಣಗಳು ಕ್ರಮವಾಗಿ $49\ cm^2$: $225\ cm^2$ ಆದರೆ ಅವುಗಳ ಅನುರೂಪ ಬಾಹುಗಳ ಅನುಪಾತ ಬರೆಯಿರಿ

16) tan 30° × tan 60° ಯ ಬೆಲೆಯನ್ನು ಕಂಡುಹಿಡಿಯಿರಿ.

III. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $8 \times 2 = 16$

17) $\sqrt{5} - 2$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

18) $3x^2 - x - 14 = 0$ ಈ ಸಮೀಕರಣದ ಮೂಲಗಳನ್ನು ' ವರ್ಗ ಸಮೀಕರಣದ ಸೂತ್ರ ' ಉಪಯೋಗಿಸಿ ಕಂಡುಹಿಡಿಯಿರಿ.

19) ಕೊಟ್ಟಿರುವ ರೇಖಾತ್ಮಕ ಸಮೀಕರಣದ ಜೋಡಿಯನ್ನು ' ವರ್ಜಿಸುವ ವಿಧಾನ ' ದಿಂದ ಬಿಡಿಸಿ. $2x - y = 7$ ಮತ್ತು $x + y = 5$

20) 5, 9, 13, ...................... ಈ ಸಮಾಂತರ ಶ್ರೇಢಿಯ 22 ನೇ ಪದವನ್ನುಸೂತ್ರವನ್ನು ಉಪಯೋಗಿಸಿ ಕಂಡುಹಿಡಿಯಿರಿ.

...................... ಅಥವಾ..............

3 ರಿಂದ ಭಾಗಿಸಲ್ಪಡುವ ಮೊದಲ 40 ಧನಾತ್ಮಕ ಪೂರ್ಣಾಂಕಗಳ ಮೊತ್ತವನ್ನು ಕಂಡುಹಿಡಿಯಿರಿ.

21) (- 2, 7) ಮತ್ತು (- 7, 4) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು 3:2 ಅನುಪಾತದಲ್ಲಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

22) P(A) = 0.63 ಆದರೆ $P(\bar{A})$ ಯ ಬೆಲೆಯನ್ನು ಕಂಡುಹಿಡಿಯಿರಿ.

23) ತ್ರಿಜ್ಯ 3.5 cm ಇರುವ ವೃತ್ತವನ್ನು ರಚಿಸಿ. ಸ್ಪರ್ಶಕಗಳ ನಡುವಿನ ಕೋನ 70° ಇರುವಂತೆ ಈ ವೃತ್ತಕ್ಕೆ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿ.

24) sin 3A = cos (A – 26°) , 3A ಲಘುಕೋನವಾದರೆ, A ಬೆಲೆ ........... ಅಥವಾ ............. Sin 60° cos 30° + sin 30° cos 60° ಬೆಲೆಯನ್ನು ಕಂಡುಹಿಡಿಯಿರಿ. ಕಂಡುಹಿಡಿಯಿರಿ

## IV) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

$9 \times 3 = 27$

25) $\sqrt{2}$ ಮತ್ತು $-\sqrt{2}$ ಇವು $2x^4 - 3x^3 - 3x^2 + 6x - 2$ ರ ಎರಡು ಶೂನ್ಯತೆಗಳಾದರೆ, ಅದರ ಎಲ್ಲಾ ಶೂನ್ಯತೆಗಳನ್ನು ಕಂಡುಹಿಡಿಯಿರಿ.

................ ಅಥವಾ ....................

$x^2 + 7x + 10$ ಎಂಬ ವರ್ಗ ಬಹುಪದೋಕ್ತಿಯ ಶೂನ್ಯತೆಗಳನ್ನು ಕಂಡುಹಿಡಿಯಿರಿ ಹಾಗೂ ಶೂನ್ಯತೆಗಳು ಮತ್ತು ಸಹಗುಣಕಗಳ ಸಂಬಂಧವನ್ನು ತಾಳೆನೋಡಿ.

26) " ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆಲಂಬವಾಗಿರುತ್ತದೆ " ಎಂದು ಸಾಧಿಸಿ.

27) BC = 6cm, AB = 5 cm ಮತ್ತು /ABC = 60° ಇರುವಂತೆ ತ್ರಿಭುಜ ABC ಯನ್ನು ರಚಿಸಿ, ನಂತರ ಮತ್ತೊಂದು ತ್ರಿಭುಜವನ್ನು ಅದರ ಬಾಹುಗಳು ತ್ರಿಭುಜ ABC ಯ ಅನುರೂಪ ಬಾಹುಗಳ 5/3 ರಷ್ಟಿರುವಂತೆ ರಚಿಸಿ.

28) ಈ ಕೆಳಗೆ ನೀಡಿರುವ ದತ್ತಾಂಶಗಳಿಗೆ ನೇರ ವಿಧಾನದಿಂದ ಸರಾಸರಿಯನ್ನು ಕಂಡುಹಿಡಿಯಿರಿ.

| ವರ್ಗಾಂತರ | 15 — 25 | 25 — 35 | 35 — 45 | 45 — 55 | 55 — 65 |
|---|---|---|---|---|---|
| ಆವೃತ್ತಿ | 6 | 9 | 4 | 5 | 6 |

............... ಅಥವಾ ..................

ಈ ಕೆಳಗಿನ ದತ್ತಾಂಶಗಳಿಗೆ ಮಧ್ಯಾಂಕ(ಮಧ್ಯಮಬೆಲೆ) ವನ್ನು ಕಂಡುಹಿಡಿಯಿರಿ.

| ವರ್ಗಾಂತರ | 0 — 10 | 10 — 20 | 20 — 30 | 30 — 40 | 40 — 50 |
|---|---|---|---|---|---|
| ಆವೃತ್ತಿ | 6 | 8 | 10 | 5 | 6 |

29) ಒಂದು ತರಗತಿಯ 35 ವಿದ್ಯಾರ್ಥಿಗಳ ತೂಕಗಳು, ಅವರ ವೈದ್ಯಕೀಯ ತಪಾಸಣೆಯ ಸಂದರ್ಭದಲ್ಲಿ ಕೆಳಗಿನಂತೆ ದಾಖಲಾದವು. ಈ ದತ್ತಾಂಶಗಳಿಗೆ 'ಕಡಿಮೆ ಇರುವ ವಿಧಾನದ ಓಜೀವ್ ರಚಿಸಿ.

| ತೂಕ Kg ಗಳಲ್ಲಿ | 38 ಕ್ಕಿಂತ ಕಡಿಮೆ | 40 ಕ್ಕಿಂತ ಕಡಿಮೆ | 42 ಕ್ಕಿಂತ ಕಡಿಮೆ | 44 ಕ್ಕಿಂತ ಕಡಿಮೆ | 46 ಕ್ಕಿಂತ ಕಡಿಮೆ | 48 ಕ್ಕಿಂತ ಕಡಿಮೆ | 50 ಕ್ಕಿಂತ ಕಡಿಮೆ | 52 ಕ್ಕಿಂತ ಕಡಿಮೆ |
|---|---|---|---|---|---|---|---|---|
| ವಿ.ಗಳ ಸಂಖ್ಯೆ | 0 | 3 | 5 | 9 | 14 | 28 | 32 | 35 |

30) A(7, -2) , B(5, 1) ಮತ್ತು C( 1, 4 ) ಈ ಶೃಂಗಬಿಂದುಗಳಿಂದ ಉಂಟಾಗುವ ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

.............. ಅಥವಾ ................

AB ವ್ಯಾಸವಾಗಿರುವ ವೃತ್ತದ ಕೇಂದ್ರ (2, - 3) ಮತ್ತು B ಯು (1, 4) ಆದರೆ, A ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

31) ತ್ರಿಜ್ಯ 4cm ಮತ್ತು ಕೋನ 30° ಇರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ಹಾಗೆಯೇ ಅನುರೂಪವಾದ ಅಧಿಕ ತ್ರಿಜ್ಯಾಂತರ ಖಂಡದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.
( π = 3.14 ಎಂದು ಬಳಸಿ)




32) ಎರಡು ಸಂಖ್ಯೆಗಳ ವರ್ಗಗಳ ವ್ಯತ್ಯಾಸವು 180 ಆಗಿದೆ. ಚಿಕ್ಕ ಸಂಖ್ಯೆಯ ವರ್ಗವು ದೊಡ್ಡ ಸಂಖ್ಯೆಯ ಎಂಟರಷ್ಟಿದ್ದರೆ, ಆ ಎರಡು ಸಂಖ್ಯೆಗಳನ್ನು ಕಂಡುಹಿಡಿಯಿರಿ

................ ಅಥವಾ .................

ಒಂದು ಲಂಬಕೋನ ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 7 cm ಕಡಿಮೆ ಇದೆ. ಅದರ ವಿಕರ್ಣದ ಉದ್ದವು 13 cm ಆದರೆ ಉಳಿದೆರಡು ಬಾಹುಗಳ ಉದ್ದಗಳನ್ನು ಕಂಡುಹಿಡಿಯಿರಿ.

33) 6 m ಮತ್ತು 11 m ಉದ್ದದ ಎರಡು ಕಂಬಗಳು ಸಮತಟ್ಟಾದ ನೆಲದ ಮೇಲೆ ನಿಂತಿವೆ. ಆ ಕಂಬಗಳ ಪಾದಗಳ ನಡುವಿನ ಅಂತರ 12m ಆದರೆ ಅವುಗಳ ತುದಿಗಳ ನಡುವಿನ ಅಂತರವೇನು?

## V) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

$4 \times 4 = 16$

34) ಒಂದು ಸಮಾಂತರ ಶ್ರೇಢಿಯಲ್ಲಿ 3 ನೇ ಪದವು 8. 9 ನೇ ಪದದ 3 ರಷ್ಟಕ್ಕಿಂತ 2 ಹೆಚ್ಚು ಇದೆ. ಹಾಗಾದರೆ ಮೊದಲ 19 ಪದಗಳ ಮೊತ್ತವನ್ನು ಕಂಡುಹಿಡಿಯಿರಿ.

.................. ಅಥವಾ .......................

ಒಂದು ಸಮಾಂತರ ಶ್ರೇಢಿಯ ಮೊದಲ ಆರು ಪದಗಳ ಮೊತ್ತ 42 . 10 ನೇ ಪದ ಮತ್ತು 30 ನೇ ಪದಗಳ ಅನುಪಾತ 1:2 ಆದರೆ ಶ್ರೇಢಿಯ 13 ನೇ ಪದ ಕಂಡುಹಿಡಿಯಿರಿ.

35) ಕೊಟ್ಟಿರುವ ರೇಖಾತ್ಮಕ ಸಮೀಕರಣಗಳ ಜೋಡಿಯ ಪರಿಹಾರವನ್ನು ನಕ್ಷೆಯ ವಿಧಾನದಿಂದ ಕಂಡುಹಿಡಿಯಿರಿ.

$2x + y = 10$ ಮತ್ತು $x - y = 2$

36) " ಎರಡು ತ್ರಿಭುಜಗಳು ಸಮಕೋನೀಯಗಳಾದರೆ, ಅವುಗಳ ಅನುರೂಪ ಬಾಹುಗಳು ಸಮಾನುಪಾತ ದಲ್ಲಿರುತ್ತವೆ " ಎಂದು ಸಾಧಿಸಿ.

37) 80 ಅಡಿ ಅಗಲವುಳ್ಳ ರಸ್ತೆಯ ಎರಡು ಬದಿಗಳಲ್ಲಿ ಒಂದೇ ಎತ್ತರವಿರುವ 2 ಕಂಬಗಳು ಅಭಿಮುಖವಾಗಿ ನಿಂತಿವೆ. ರಸ್ತೆಯ ಮೇಲಿನ ಒಂದು ಬಿಂದುವಿನಿಂದ ಕಂಬದ ಮೇಲ್ತುದಿಗಳ ಉನ್ನತ ಕೋನಗಳು ಕ್ರಮವಾಗಿ 60° ಮತ್ತು 30° ಆಗಿದೆ. ಕಂಬಗಳ ಎತ್ತರವನ್ನು ಮತ್ತು ಕಂಬಗಳಿಂದ ರಸ್ತೆಯ ಮೇಲಿನ ಬಿಂದುವಿಗಿ - ರುವ ದೂರವನ್ನು ಕಂಡುಹಿಡಿಯಿರಿ.

## VI) ಕೆಳಗಿನ ಪ್ರಶ್ನೆಗೆ ಉತ್ತರಿಸಿ :

$1 \times 5 = 5$

38) ಒಂದು ಲೋಹದಿಂದ ಮಾಡಿದ ವೃತ್ತಪಾದ ಶಂಕುವಿನ ಎತ್ತರ 20 cm ಮತ್ತು ಶೃಂಗ ಕೋನವು 60°. ಈ ಶಂಕುವನ್ನು ಅದರ ಎತ್ತರದ ಮಧ್ಯಭಾಗದಲ್ಲಿ , ಪಾದಕ್ಕೆ ಸಮಾಂತರವಾಗಿ ಒಂದು ಸಮತಲದ ಮೂಲಕ ಕತ್ತರಿಸಿದೆ. ಈ ರೀತಿಯಾಗಿ ಪಡೆದ ಶಂಕುವಿನ ಭಿನ್ನಕವನ್ನು ತಂತಿಯ ವ್ಯಾಸ 1/16 cm ಇರುವಂತೆ ತಂತಿಯಾಗಿ ಎಳೆದರೆ ತಂತಿಯ ಉದ್ದವನ್ನು ಕಂಡುಹಿಡಿಯಿರಿ.